ಶ್ರೀ ಎಸ್. ನಿಜಲಿಂಗಪ್ಪ.—ಎಲ್ಲೆಲ್ಲಿ ಅನುಮಾನ ಬರುತ್ತದೆಯೋ ಅಂಥಲ್ಲಿ ಲೀಗಲ್ ಒಪಿನಿಯನ್ ತೆಗೆದುಕೊಳ್ಳುತ್ತೇವೆ. ಸಾಧಾರಣವಾಗಿ ಕಷ್ಟ ಇದ್ದರೆ ಲೀಗಲ್ ಒಪಿನಿಯನ್ ತೆಗೆದು ಕೊಳ್ಳುತ್ತೇವೆ.

Sri G. V. GOWDA.—The Hon'ble Chief Minister was pleased to say that the Inter-State Seniority List so far as Education Department is concerned has now been published. Is it not a fact that even before the List was published promotions were given and they were challenged in the High Court.

Sri S. NIJALINGAPPA.—Temporary arrangements will have to be made to carry on the work. Naturally, those who were affected adversely have gone to the Court.

ಶ್ರೀ ಎ. ಜೆ. ದೊಡ್ಡಮೇಟಿ.—ಅಂತರರಾಜ್ಯ ಸೀನಿಯಾರಿಟಿ ಪಟ್ಟಿ ಆದಷ್ಟು ತೀವ್ರ ನಿರ್ಣಯಿಸುತ್ತೇವೆ ಎಂದು ಉತ್ತರ ಹೇಳಿದ್ದಾರೆ. ತೀವ್ರ ಅಂದರೆ ಅಂತಿಮವಾಗಿ ನಿರ್ಣಯಿಸುವುದಕ್ಕೆ ಪರಮಾವಧಿ ಎಷ್ಟು ಕಾಲದಲ್ಲಿ ಮಾಡಬೇಕೆಂದು ಇದ್ದೀರಿ? ಇನ್ನೂ ಎಷ್ಟು ದಿವಸ ಬೇಕು?

ಶ್ರೀ ಎಸ್. ನಿಜಲಿಂಗಪ್ಪ.—ನನ್ನ ಅಭಿಪ್ರಾಯದಲ್ಲಿ ಈ ವರ್ಷದ ಕೊನೆ ಒಳಗಾಗಿ ಈ ಕೆಲಸ ಪೂರೈಸಿ ಬಿಡುತ್ತೇವೆ.

Sri K. H. RANGANATH.—With regard to Agricultural Demonstrators, the answer is that 82 cases have been decided. May I know the reason for not publishing the list of decided cases?

Sri S. NIJALINGAPPA.—Until the entire final list is decided, it cannot be published. Immediately we take a decision, with regard to other 8 representations final list will be published.

ಶ್ರೀಮತಿ ಸುಶೀಲ ಬಾಯಿ ಹೀರಾಜಂದ್‌ಷಾ.—ನ್ಯಾಮಿ, ಮುಂಬಯಿ ಕರ್ನಾಟಕ ಪ್ರದೇಶದಲ್ಲಿರುವ ಅಧಿಕಾರಿಗಳಿಗೆ ಸೀನಿಯಾರಿಟಿ ಪ್ರಕಾರ ಪ್ರಮೋಷನ್ ದೊರೆಯುವುದರಲ್ಲಿ ಬಹಳ ಅನ್ಯಾಯವಾಗಿದೆ. ಅಲ್ಲದೆ ಅಗ್ರಿಕಲ್ಚರಲ್ ಆಫೀಸರುಗಳಿಗೆ ಸೀನಿಯಾರಿಟಿ ಪ್ರಕಾರ ಪ್ರಮೋಷನ್ ಸಿಕ್ಕಲಿಲ್ಲ ಇದು ನಿಜವೇನು?

ಶ್ರೀ ಎಸ್. ನಿಜಲಿಂಗಪ್ಪ.—ಯಾರಿಗೆ ಏನೇನು ಸಿಕ್ಕಬೇಕೋ ಅದು ಅವರಿಗೆ ಸಿಕ್ಕಿದೆ ಆಜ್ಞೆಯರು ಪಟ್ಟಿಯಲ್ಲಿ ಸೀನಿಯಾರಿಟಿ ನಿರ್ಣಯವಾದ ಪ್ರಕಾರ ನಡೆದುಕೊಳ್ಳುತ್ತೇವೆ. ಯಾರಿಗೂ ಅನ್ಯಾಯವಾಗಿಲ್ಲ.

Rural Industrial Co-operative Society

*Q.—421. Sri K. H. RANGANATH (Mudigere).—

Will the Government be pleased to state :—

(*a*) whether there was any Rural Industrial Co-operative Society registered with its head quarters at Krishnarajapuram, Bangalore South Taluk, and if so, whether it is functioning ;

(*b*) the total amount of money advanced to the said Society ;

(*c*) the amount collected by the Society towards its share capital ;

(*d*) whether the accounts of the said Society have been audited so far ;

(*e*) if so, the loss or misappropriation, if any ; and the person or persons who is responsible for the loss or misappropriation ?

A.—Sri KONDAJJI BASAPPA (Deputy Minister for Co-operation).—

(*a*) Yes, but it has now been amalgamated with the Bangalore South Taluk Rural Industrial Co-operative Society.

(*b*) Rs. 84,340.

(*c*) Rs. 9,868.

(*d*) Yes, upto 1958-59.

(*e*) Loss : 2,280-13 during 1958-59.
Misappropriation Nil.

Since the loss has been incurred in the general working of the Society, no office-bearer of the Society is responsible for the same.

ಶ್ರೀ ಕೆ. ಎಚ್. ರಂಗನಾಥ್.—ಈ ರೂರಲ್ ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಸೊಸೈಟಿ ಯಾವ ವರ್ಷದಲ್ಲಿ ಪ್ರಾರಂಭವಾಯಿತು ?

ಶ್ರೀ ಕೊಂಡಜ್ಜಿ ಬಸಪ್ಪ.—ಕೃಷ್ಣರಾಜಪುರಂ ರೂರಲ್ ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಸೊಸೈಟಿಯು 1957-58ರಲ್ಲಿ ರಿಜಿಸ್ಟರ್ ಆಯಿತು.

ಶ್ರೀ ಕೆ.ಎಚ್. ರಂಗನಾಥ್.—1958-59ರಲ್ಲಿ 2280—13ರೂ. ನಷ್ಟವಾಗಿದೆ ಎಂದು ಉತ್ತರ ಹೇಳಿದೆ. ಹಾಗಾದರೆ 1957-58 ರಿಂದ ಆಗಿರುವ ಒಟ್ಟು ನಷ್ಟ ಎಷ್ಟು ?

ಶ್ರೀ ಕೊಂಡಜ್ಜಿ ಬಸಪ್ಪ.—ಸೊಸೈಟಿಗೆ ಲಾಭ ಆಗಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಅಮಲ್ಗಮೇಟ್ ಆದುದು ಯಾವಾಗ ?

Sri KONDAJJI BASAPPA.—That is in the year 1957-58. As I told you, all the Hobli Societies, *viz.*, Uttarahalli, Kengeri, Krishnarajapuram and Begur, were amalgamated in the year 1957-58.

ಶ್ರೀ ಬೈರಪ್ಪಾಜಿ.—ಸ್ವಾಮಿ, ಉತ್ತರ (ಡಿ)ನಲ್ಲಿ 1958-59ನೇ ವರ್ಷದ ವರೆಗೆ ಅಕೌಂಟ್ಸ್ ತನಿಖೆಯಾಗಿದೆ ಆಡಿಟ್ ಆಗಿದೆ ಎಂದು ಉತ್ತರ ಹೇಳಿದೆ. ಅಲ್ಲಿಂದ ಈಚೆಗೆ ಆಡಿಟ್ ಆಗಿಲ್ಲವೇ ? ಇವತ್ತಿನ ವರೆಗೆ ಆರೇಳು ವರ್ಷಗಳಾದರೂ ಕೂಡ ಸೊಸೈಟಿ ಅಕೌಂಟ್ಸ್ ಆಡಿಟ್ ಮಾಡದೇ ಇರತಕ್ಕಂಥ ಸರಕಾರದ ನೀತಿ ಸರಿಯೇ ?

Sri KONDAJJI BASAPPA.—There were not sufficient number of Auditors last year. We have strengthened the audit staff, and the audit work of the society is going on. I understand that the audit work is likely to be completed in the course of the year.

1-30 P.M.

ಶ್ರೀ ಬಿ. ಎರ್. ಗೌಡ.—ಈ ಕೈಗಾರಿಕೆಯ ಸಹಕಾರ ಸಂಘ ಇಲ್ಲಿಯವರೆಗೆ ಎಷ್ಟು ಸಹಕಾರ ಕೈಗಾರಿಕೆಗಳಿಗೆ ಸಾಲವನ್ನು ಕೊಟ್ಟಿದೆ ಅವುಗಳಲ್ಲಿ ಯಾವ ಯಾವುದು ಎಷ್ಟರ ಮಟ್ಟಿಗೆ ಅಭಿವೃದ್ಧಿಗೆ ಬಂದಿವೆ ?

ಶ್ರೀ ಕೊಂಡಜ್ಜಿ ಬಸಪ್ಪ.—ಇದುವರೆಗೆ ಇದು 57 ಜನರಿಗೆ ಸಾಲವನ್ನು ಕೊಟ್ಟಿದೆ. ಅದರ ಪೈಕಿ ಖಾದೀ ಅಂಡ ವಿಲೇಜ ಇಂಡಸ್ಟ್ರೀಸ ಬಗ್ಗೆ ಸಾಲ ಪಡದಿದ್ದವರು ಅದನ್ನು ಮಿನಪ್ಲಿಕೇಷನ್ ಮಾಡಿದ್ದಾರೆಂದು ರಿಪ್ಪೋರ್ಟ್ ಬಂದಿದೆ. ವಿಚಾರ ಮಾಡುತ್ತಿದ್ದೇವೆ.

ಶ್ರೀ ಕೆ. ಎಚ್. ರಂಗನಾಥ್.—ಈಗ ಬೆಂಗಳೂರು ದ. ತಾಲ್ಲೂಕು ಸ. ಸಂಘ ಕೆಲಸಮಾಡುತ್ತಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಇಲ್ಲ ಅದೀಗಲೂ ಕೆಲಸ ಮಾಡುತ್ತಿದೆ.

ಶ್ರೀ ಕೆ. ಎಚ್. ರಂಗನಾಥ್.—ಇದರ ಅಧ್ಯಕ್ಷರು ಮೊದಲದ್ದವರೇ ಇದ್ದಾರೆಯೋ ಅಥವಾ ಬೇರೆ ಅಧ್ಯಕ್ಷರೋ ?

ಶ್ರೀ ಕೊಂಡಜ್ಜಿ ಬಸಪ್ಪ.—ಈಗ ಬೇರೆಯವರು ಅಧ್ಯಕ್ಷರಾಗಿದ್ದಾರೆ.

ಶ್ರೀ ಅಂದಾನಯ್ಯ.—(ಸಿ)ಗೆ ಉತ್ತರವಾಗಿ ಸರ್ಕಾರದವರು ಆಫೀಸಿನ ಬೇರರ್ಸ್ ನಷ್ಟಕ್ಕೆ ಜವಾಬ್ದಾರರಲ್ಲ ಎಂದು ತಿಳಿಸಲಾಗಿದೆ. ಹಾಗಾದರೆ ಈ ಸಾಲಕ್ಕೆ ಯಾರು ಕಾರಣರು ?

ಶ್ರೀ ಕೊಂಡಜ್ಜಿ ಬಸಪ್ಪ.—The management itself is responsible.

ಶ್ರೀ ಜಿ. ರಾಮೇಗೌಡ.—ಈ ಸಹಕಾರ ಸಂಘದ ಸರ್ವ ಸದಸ್ಯರ ಸಮ್ಮೇಳನ ಕ್ರಮವಾಗಿ ವರ್ಷ ವರ್ಷ ನಡೆಯುತ್ತಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಈ ಅಮಲ್ಗಮೇಷನ್ ಆದಮೇಲೆ ಒಂದಾವರ್ತಿ ಮಾತ್ರ ನಡೆದಿದೆ, ಇತ್ತೀಚೆಗೆ ನಡೆದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ಸಹಕಾರ ಸಂಘದ ಕೆಲಸ ನಡೆಯುತ್ತಿಲ್ಲ ಎಂದ ಮೇಲೆ ಅಲ್ಲಿ ಖರ್ಚಾಗತಕ್ಕ ಹಣವೆಲ್ಲಾ ಕೇವಲ ಆ ಶಿಬ್ಬಂದಿಯ ವೆಚ್ಚಕ್ಕೆ ತಾನೆ ?

ಶ್ರೀ ಜಿ. ರಾಮೇಗೌಡ.—ಜನರರ್‌ಬಾಡಿ ಮಾಟಿಂಗನ್ನು ಕರೆಯುವುದಕ್ಕೆ ಆಡಿಟ್ ರಿಪೋರ್ಟ್ ಇರಲೇಬೇಕೆಂಬ ನೇಮವಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಆ ಜನರಲ್ ಬಾಡಿಯಲ್ಲಿ ಯಾವ ವರ್ಷದ ಕಡೇ ಆಡಿಟ್ಟಾಗಿರುತ್ತದೋ ಆ ರಿಪೋರ್ಟ್ ಇರಬೇಕು. ಅದಿಲ್ಲದಿದ್ದರೂ ಜನರಲ್ ಬಾಡಿಯಲ್ಲಿ ಬೇರೆಕಾರ್ಯಗಳನ್ನು ಟ್ರಾನ್ಸಾಕ್ಟ್ ಮಾಡುವುದಕ್ಕೆ ಅವಕಾಶವಿದೆ.

Misappropriation in Avare Male Service Co-operative Society, Kanakapura Taluk.

*Q.—454. Sri K. L. SHIVALINGE GOWDA (Virupakshipura).—

Will the Government be pleased to state :—

(*a*) whether any amount has been misappropriated in Avare Male Service Co-operative Society, Maralavadi Hobli, Kanakapura Taluk, and if so, how much ;

(*b*) whether any fraudulent entries have been noticed in the bills pertaining to the transaction of the Society.

(*c*) the action taken by them regarding the recovery of the amount misappropriated ?

A.—Sri KONDAJJI BASAPPA (Deputy Minister for Co-operation).—

(*a*) Yes. Rs. 1,274-45 p.

(*b*) Yes.

(*c*) Arbitration case filed against the Secretary.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಈ ಸಂಘದ ಕೆಲಸ ಕಾರ್ಯಗಳನ್ನು ನಡಸತಕ್ಕ ಎಲ್ಲಾ ಅಧಿಕಾರಗಳನ್ನೂ ಅಧ್ಯಕ್ಷರೇ ಹೊಂದಿದ್ದಾರೆಂಬ ಸಂಗತಿ ಸರ್ಕಾರದವರಿಗೆ ಗೊತ್ತಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಅವರೊಬ್ಬರೇ ಅಲ್ಲ,ಅಲ್ಲಿ ಸೆಕ್ರೆಟರಿಗಳಾಗಿರತಕ್ಕವರೂ ಕೂ ಅಧ್ಯಕ್ಷರ ಪರವಾಗಿ ಕೆಲಸಮಾಡತಕ್ಕ ಅಧಿಕಾರವನ್ನು ಪಡೆದಿರುತ್ತಾರೆ.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಆ ಜನರಲ್ ಬಾಡಿಯವರಿಂದ ಅದರಲ್ಲಿ ನಡೆಯತಕ್ಕ ಎಲ್ಲಾ ಕೆಲಸ ಕಾರ್ಯಗಳ ಅಧಿಕಾರವನ್ನೂ ಅಧ್ಯಕ್ಷರೇ ಪಡೆದುಕೊಂಡಿರುತ್ತಾರೆಂಬ ಸಂಗತಿ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಅಧ್ಯಕ್ಷರು ಪ್ರೊಸೀಡಿಂಗ್ಸ್ ನೆಡೆಸುವಾಗ ಪ್ರಿಸೈಡ್ ಮಾಡುತ್ತಾರೆ. He is equally responsible because he is the President of the Institution.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಈ ಸಹಕಾರ ಸಂಘದ ಅಧ್ಯಕ್ಷರು ಯಾರು ?

ಅಧ್ಯಕ್ಷರು.—ಅವರ ಹೆಸರನ್ನು ಹೇಳಬೇಕಾಗಿಲ್ಲ.

ಶ್ರೀ ಬಿ. ಎಲ್. ಗೌಡ.—ಆ ಸಂಘದಲ್ಲಿ 1274-45 ಪೈ ದುರುಪಯೋಗವಾಗಿದೆ ಎಂದು ತಿಳಿದು ಬಂದಮೇಲೆ ಅದನ್ನು ವಸೂಲು ಮಾಡುವುದಕ್ಕೇನು ಕಾರ್ಯಕ್ರಮವನ್ನು ಸರ್ಕಾರ ಕೈಗೊಂಡಿದೆ ?